


# ಪುನರ್ನವ

ಭಾಗ-೨

ಸಂಪಾದಕರು

ಡಾ. ಈರಣ್ಣ ಇಂಜಗನೇರಿ

ಡಾ. ಶಿವಾನಂದ ಬ. ಟವಳಿ

# ಪುನರ್ನವ ಭಾಗ-೨


ಸಂಪಾದಕರು : ಡಾ. ಈರಣ್ಣ ಇಂಜಗನೇರಿ
ಡಾ. ಶಿವಾನಂದ ಬ. ಟವಳಿ

ಪ್ರಕಾಶಕರು : ಬಸು ಪ್ರಕಾಶನ, ಧಾರವಾಡ,
ಮೊ. ೯೭೩೮೬೬೪೮೭೭

ಮೊದಲಮುದ್ರಣ : ೨೦೨೦

ಪುಟಗಳು : xx + ೩೧೬

ಪ್ರತಿಗಳು : ೧೦೦೦

ಹಕ್ಕುಗಳು : ಪ್ರಕಾಶಕರದು

ಬಳಸಿದ ಕಾಗದ : ೮೦ ಜಿ.ಎಸ್.ಎಮ್.

ಬೆಲೆ : ರೂ. ೩೦೦/-

ಮುಖಪುಟ ವಿನ್ಯಾಸ : ಶ್ರೀ ರವಿ ಗೋವನಕೊಪ್ಪ

ಮುದ್ರಕರು : ಬಿ. ಜಿ. ಪ್ರಿಂಟರ್ಸ್, ಧಾರವಾಡ. ೯೮೪೫೨ ೭೦೧೧೪


---

## PUNARNAVA- Part-2


Editors : **Dr. Iranna Injaganeri**
Lecturer, Dept. of Kannada,
HIPU College, Dharwad. Cell No.- 9901669309

**Dr. Shivanand B. Tavali**
Lecturer, Dept. of Kannada,
J.S.S. College, Dharwad. Cell No.- 9844035788

Published by : **Basu Prakashana, Dharwad**
Cell No.- 9738664877
Email-basuprakashana@gmail.com

Rights : Publications

First Impression : 2020

Copies : 1000

Pages : xx + 316

Price : 300/-

Size : 1/8 Demi

Paper : 80 GSM Maplitho

Printed at : B.G. Printers, Dharwad. 98452 70114

**ISBN No : 978-81-939340-6-7**

# ಒಳಪುಟಗಳಲ್ಲಿ


೦೧. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ..1
– ಡಾ. ಶೀಲಾದೇವಿ ಎಸ್. ಮಳೀಮಠ

೦೨. ಸಾಹಿತ್ಯ : ವಿಜ್ಞಾನ – ತಂತ್ರಜ್ಞಾನ ..8
– ಡಾ. ಎಸ್. ಬಿ. ರಾಠೋಡ

೦೩. ನಂದನವನವನ್ನು ಕಾಂಕ್ರೀಟ್ ಮಾಡುವ ಮುನ್ನ ..15
– ಡಾ. ಮನೋಜ ಗೋಡಬೋಲೆ

೦೪. ಭಾರತದ ಪ್ರತಿಷ್ಠೆ ಸಂಸ್ಕೃತ – ಸಂಸ್ಕೃತಿ ..21
– ಡಾ. ರಜನಿ ಎಚ್.

೦೫. ಕನ್ನಡ ಪತ್ರಿಕೆಯಲ್ಲಿ ಅಂಕಣ ಸಾಹಿತ್ಯದ ಪ್ರಭಾವ ..26
– ಡಾ. ಯಮನೂರಪ್ಪ

೦೬. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ..31
– ಪುಂಡಲೀಕ ಮಾದರ

೦೭. ಹೊಯ್ಸಳ ಕಲೆ ಮತ್ತು ವಾಸ್ತುಶಿಲ್ಪ ..40
– ಶಿವಾನಂದ ಜಿ.

೦೮. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು ..45
– ಪ್ರೊ. ತುಳಸಾಬಾಯಿ ಹುರಕಡ್ಲಿ

೦೯. ಭಾಷೆ ಮತ್ತು ಸಾಹಿತ್ಯಕ್ಕೆ ಬಿಜಾಪುರದ ಆದಿಲ್‌ಷಾಹಿಗಳ ಕೊಡುಗೆಗಳು ..51
– ಡಾ. ಶ್ರೀಧರ ಚಿ. ಕಾಂಬಳೆ

೧೦. ನಿರಂತರ ಓದುಗರನ್ನು ಹೊಂದಿದ ದಿನಪತ್ರಿಕೆ ಸಾಹಿತ್ಯ ..54
– ಡಾ. ನಾಗರಾಜ ಡಿ. ಮುರಗೋಡ

೧೧. ನಾಡವರು ಮತ್ತು ಆಧುನಿಕತೆ ..58
– ಆಶಾಲತಾ ಜಿ. ನಾಯಕ

೧೨. ವಚನ ಸಾಹಿತ್ಯ ಮತ್ತು ಸ್ತ್ರೀಸಂವೇದನೆ ..65
– ಮಂಗಳಾ ಬಿ. ಎನ್.

೧೩. ೧೮೩೧ರ ನಗರ ರೈತ ದಂಗೆ : ಬೂದಿ ಬಸಪ್ಪನ ನಾಯಕತ್ವದ ಅವಲೋಕನ ..71
– ನರಸಿಂಹ ಮೂರ್ತಿ ಟಿ. ಎಸ್.

೧೪. ವಿಶೇಷಚೇತನರ ಸಬಲೀಕರಣದಲ್ಲಿ “ಕಲ್ಯಾಣ ಕರ್ನಾಟಕ”ದ ಪಾತ್ರ–ಒಂದು ಅವಲೋಕನ ..77
– ಶಂಕರಲಿಂಗ ಟವಳಿ

# ಸಾಹಿತ್ಯ : ವಿಜ್ಞಾನ – ತಂತ್ರಜ್ಞಾನ

– ಡಾ. ಎಸ್. ಬಿ. ರಾಠೋಡ

**ಪೀಠಿಕೆ**

ಎರಡೂವರೆ ಸಾವಿರ ವರ್ಷವುಳ್ಳ ಕನ್ನಡ ಸಾಹಿತ್ಯ ಇತಿಹಾಸಕ್ಕೆ ತನ್ನದೆ ಆದ ಒಂದು ಚಾರಿತ್ರಿಕ ಹಾಗೂ ವೈಜ್ಞಾನಿಕ ದಾಖಲೆಯಿದೆ. ೪೫೦ ರಿಂದ ತನ್ನದೆ ಆದ ಗಟ್ಟಿತನದಲ್ಲಿ ಕನ್ನಡ ಸಾಹಿತ್ಯ ರಾರಾಜೀಸುತ್ತಿರುವುದು ಹೆಮ್ಮೆಯ ಸಂಗತಿ. ಚರಿತ್ರೆಯಲ್ಲಿ ರಾಜ, ರಾಣಿಯರ ವ್ಯಕ್ತಿತ್ವದ ಕುರಿತು, ಆಡಳಿತದ ಕುರಿತು, ಆಸ್ಥಾನದ ಪ್ರಜೆಗಳ ಕುರಿತು, ಹಲವಾರು ಕೃತಿಗಳಲ್ಲಿ ಧರ್ಮದ ವಿಚಾರಗಳ ಕುರಿತು ಪ್ರಸ್ತಾಪ ಇದೆ. ಹೀಗೆ ಕನ್ನಡ ಸಾಹಿತ್ಯದುದ್ದಕ್ಕೂ ವೈಭವಿಕರಣದ ಚರಿತ್ರೆ ದೊರೆಯುತ್ತದೆ. ಒಂದು ಕಾಲದಲ್ಲಿ ರಾಜಾಶ್ರಯದಲ್ಲಿ ಮೆರೆಯುತ್ತಿದ್ದ ಸಾಹಿತ್ಯ ಒಮ್ಮೆಲೆ ತಿರುವು ಕಂಡದ್ದು ಹನ್ನೆರಡನೆಯ ಶತಮಾನದಲ್ಲಿ ರಾಜಾಶ್ರಯನ್ನು ತೊರೆದು, ಸಾಹಿತ್ಯ ಜನಸಾಮಾನ್ಯರ ಮಧ್ಯ ಬಂದು ನಿಂತದ್ದು; ಈ ಕಾಲದಲ್ಲಿ ಸಾಹಿತ್ಯ ಸರಳೀಕರಣ ಪಡೆದುಕೊಂಡದ್ದು, ಜನಸಾಮಾನ್ಯರು ಸಾಹಿತ್ಯದಲ್ಲಿ ನಾಯಕ ಪದವಿ ಪಡೆದುಕೊಂಡದ್ದು, ಸಮಾಜದಲ್ಲಿ ಸಾಮಾಜಿಕ ಬದಲಾವಣೆ ತಂದುಕೊಂಡದ್ದು, ಹೆಣ್ಣು ಗಂಡು ಎಂಬ ಭೇದ-ಭಾವವನ್ನು ತೆಗೆದು ಹಾಕಲು ಪ್ರಯತ್ನಪಟ್ಟದ್ದು ಹೀಗೆ ಸಾಹಿತ್ಯ ಮತ್ತು ವಚನ ಸಾಹಿತ್ಯ ತಿರುವಿನೊಂದಿಗೆ ಮುನ್ನುಗ್ಗಿದ್ದು ಆ ಕಾಲದ ಚಾರಿತ್ರಿಕ ದಾಖಲೆ.

**ಸಾಹಿತ್ಯ ಮತ್ತು ವೈಜ್ಞಾನಿಕತೆ**

ಸಾಹಿತ್ಯ ಅಂದರೇನು? ಸಾಹಿತ್ಯ ಉಪಜೀವನಕ್ಕೆ ಆಗುತ್ತಾ? ಸಾಹಿತ್ಯದಿಂದ ವ್ಯವಹಾರಿಕ ಜ್ಞಾನ ಸಿಗುತ್ತಾ? ಸಾಹಿತ್ಯದಿಂದ ಹಣಸಂಪಾದನೆ ಆಗುತ್ತಾ ? ಸಾಹಿತ್ಯದಲ್ಲಿ ವಿಜ್ಞಾನ-ತಂತ್ರಜ್ಞಾನ ಇದೆಯಾ ? ಸಾಹಿತ್ಯದಿಂದ ಸಮಾಜ ಸುಧಾರಣೆ ಆಗುತ್ತಾ ? ಹೀಗೆ ಹಲವಾರು ಪ್ರಶ್ನೆಗಳು ಎದುರಾಗುವವು. ಈ ಸಂದರ್ಭದಲ್ಲಿ ಸಾಹಿತಿ ಮೂಖವಿಸ್ಮಯನಾಗಿ ಸುಮ್ಮನಾಗಬಹುದು. ಆದರೆ ಸಾಹಿತ್ಯದಿಂದ ಈ ಮೇಲಿನ ಅಂಶಗಳು ಎಲ್ಲವೂ ಸಾಧ್ಯ. ಸಾಹಿತ್ಯ ಅಂದರೆ-ಸ್ವಸಂತೋಷಕ್ಕೋಸ್ಕರ ರಚಿತವಾಗಿ ಮನಸ್ಸಿಗೆ ಮುದ ನೀಡಿ, ಸಹೃದಯಿಗಳ, ಮನುಸ್ಸು ಗೆಲ್ಲುವುದೇ ಸಾಹಿತ್ಯ. ಸಾಹಿತ್ಯ ಮತ್ತು ಸಂಗೀತದ ಮಿಲನದಿಂದ ಕೊರಡು ಕೊನರುತ್ತದೆ ಎಂಬ ಮಾತು ಸತ್ಯ.

ಸಾಹಿತ್ಯದಿಂದ ಜೀವ ಹೇಗೆ ಉಳಿಯುತ್ತದೆ ಎಂಬುದನ್ನು ಈ ಪದ್ಯದ ಮೂಲಕ ಉದಾರಿಸಲಾಗಿದೆ. ಹಿಂದಿನ ಕಾಲದಲ್ಲಿ ರಾಜರ ಆಸ್ಥಾನದಲ್ಲಿ